(ಶ್ರೀ ಟಿ. ಚನ್ನಯ್ಯ.)

ಕಾನೂನು ಅನುಸರಿಸಿ ಕ್ರಮಜರುಗಿಸಿ ವಸೂಲು ಮಾಡುತ್ತೇವೆ.

ಶ್ರೀ ಕೆ. ವಿ. ಬೈರೇಗೌಡ —ಹಾಗಾದರೆ, ರೆವಿನ್ಯೂ ಅಧಿಕಾರಿಗಳು ಕೇವಲ ರೆವಿನ್ಯೂ ಬಾಕಿಗಳನ್ನು ವಸೂಲು ಮಾಡುತ್ತಾರೆಯೇ ವಿನಾ ಗ್ರಾಮ ಪಂಚಾಯಿತಿ ಬಾಕಿಗಳ ವಸೂಲಿಗೆ ಗಮನಕೊಡುವುದಿಲ್ಲವೆಂದು ಅರ್ಥವಾಗುವುದಿಲ್ಲವೆ ?

ಶ್ರೀ ಟಿ. ಕೆಂಚರಾಜ್.—ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಅನೇಕ ಗ್ರಾಮ ಪಂಚಾಯ್ತಿಗಳವರು ಬಾಕಿ ಇಟ್ಟುಕೊಂಡಿದ್ದಾರೆಂದು ಉತ್ತರ ಕೊಟ್ಟಿದೆ, ದಕ್ಷಿಣ ತಾಲ್ಲೂಕಿನಲ್ಲಿ ಎಷ್ಟಿದೆಯೆಂಬುದನ್ನೇಕೆ ಕೊಟ್ಟಿಲ್ಲ?

ಶ್ರೀ ಟಿ. ಚನ್ನಯ್ಯ.—ದಕ್ಷಿಣ ತಾಲ್ಲೂಕಿನ ಬಾಕಿ ಪಟ್ಟಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಪಂಚಾಯಿತಿ ಬಾಕಿಯನ್ನು ವಸೂಲು ಮಾಡುವುದಕ್ಕೆ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರನ್ನು ನೇಮಿಸಬೇಕೆಂದು ಸರ್ಕಾರಕ್ಕೆ ಮನವಿ ಬಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಪಂಚಾಯಿತಿ ಬಾಕಿ ವಸೂಲು ಮಾಡುವುದಕ್ಕೆ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರನ್ನು ನೇಮಿಸುವುದರಿಂದ ಜಾಗ್ರತೆ ಬಾಕಿ ವಸೂಲು ಮಾಡಬಹುದೆಂಬುದು ಸರ್ಕಾರಕ್ಕೆ ಗೊತ್ತಿದೆಯೆ ?

ಶ್ರೀ ಟಿ. ಚನ್ನಯ್ಯ.— ಈಗಿರತಕ್ಕ ರೆವಿನ್ಯೂ ಇನ್‌ಸ್ಪೆಕ್ಟರುಗಳೇ ತಪಷ್ಟು ಮಾಡುತ್ತಿದ್ದಾರೆ, ಬೇರೆ ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರನ್ನು ನೇಮಕಮಾಡಿ ಅವರಿಂದ ವಸೂಲು ಮಾಡಿಸುವುದು ಅವಶ್ಯಕವಿಲ್ಲವೆಂದು ಬಿಟ್ಟಿದ್ದೇವೆ.

ಶ್ರೀ ಬಿ. ಟಿ. ಕೆಂಪರಾಜ್.—ಈಗಿರತಕ್ಕ ರೆಗ್ಯುಲರ್ ರೆವಿನ್ಯೂ ಇನ್‌ಸ್ಪೆಕ್ಟರು ಮಾಪತಿಲ್ಲವಾದುದರಿಂದ ಇಷ್ಟು ಬಾಕಿ ಇದೆ ಎನ್ನುವುದು ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳಿಂದಲೇ ಸರ್ಕಾರದವರ ಗಮನಕ್ಕೆ ಬಂದಿಲ್ಲವೆ ?

ಶ್ರೀ ಟಿ. ಚನ್ನಯ್ಯ — ಈಗಿರತಕ್ಕವರೇ ವಸೂಲು ಮಾಡುವುದಕ್ಕೆ ಸಾಧ್ಯ, ಅವರೇ ಮಾಡಬೇಕೆಂದೂ ಬೇರೆ ರೆವಿನ್ಯೂ ಇನ್‌ಸ್ಪೆಕ್ಟರನ್ನು ನೇಮಕ ಮಾಡುವುದು ಸೂಕ್ತವಲ್ಲವೆಂದೂ ಸರ್ಕಾರದವರು ತೀರ್ಮಾನಮಾಡಿದ್ದಾರೆ.

ಶ್ರೀ ಬಿ. ಟಿ. ಕೆಂಪರಾಜ್.—ಹಾಗಾದರೆ ಇಷ್ಟು ಬಾಕಿ ಉಳಿದಿರುವುದಕ್ಕೆ ಕಾರಣವೇನು, ಇದನ್ನು ವಸೂಲು ಮಾಡಲು ಏನು ಕಾರ್ಯಕ್ರಮಕ್ಕೆ ಗೊಂಡಿದ್ದೀರಿ ?

ಶ್ರೀ ಟಿ. ಚನ್ನಯ್ಯ.— ಆಯಾ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳ ಬಾಕಿಗಳನ್ನು ವಸೂಲು ಮಾಡುವುದಕ್ಕೆ ರೆವಿನ್ಯೂ ಇನ್‌ಸ್ಪೆಕ್ಟರುಗಳ ಮೂಲಕ ಸರ್ವ ಪ್ರಯತ್ನವನ್ನೂ ಅಮಲ್ದಾರರು ಮಾಡುತ್ತಿದ್ದಾರೆ. ಎಲ್ಲಿ ಜಾಸ್ತಿ ಬಾಕಿ ಇದೆಯೋ ಅಲ್ಲಿ ಸೂಕ್ತ ಕ್ರಮಗಳನ್ನು ತೆಗೆದು ಕೊಳ್ಳುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರು ದಕ್ಷಿಣ ತಾಲ್ಲೂಕಿನ ಸ್ಯಾನಿಟೆರಿ ಬೋರ್ಡಿನಿಂದ ತೆಗೆದ ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿ ರಚನೆಯಾಗದೇಯಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಸ್ಯಾನಿಟೆರಿ ಬೋರ್ಡ್ ಪ್ರದೇಶಕ್ಕೆ ಸೇರಿದ ಗ್ರಾಮಗಳ ಒಕಾಯನ್ನು ಅವರೇ ವಸೂಲು ಮಾಡುತ್ತಾರೆ, ರೆವಿನ್ಯೂ ಇಲಾಖೆಯವರು ಅಲ್ಲಿ ಬಾಕಿ ವಸೂಲು ಮಾಡುತ್ತಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನನ್ನ ಪ್ರಶ್ನೆ ಸ್ಯಾನಿಟೆರಿ ಬೋರ್ಡಿಗೆ ಸುಮಾರು 30 ಹಳ್ಳಿಗಳು ಸೇರಿದ್ದವು. ಈಗ ಸುಮಾರು ಇಪ್ಪತ್ತು ಹಳ್ಳಿಗಳನ್ನು ಬಿಟ್ಟು ಕೊಟ್ಟಿದ್ದಾರೆ, ಇವುಗಳಿಗೆ ಗ್ರಾಮ ಪಂಚಾಯಿತಿಗಳನ್ನು ರಚನೆ ಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಇದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ಗ್ರಾಮಗಳಲ್ಲಿ ಪಂಚಾಯಿತಿಗಳನ್ನು ರಚನೆಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಸ್ಯಾನಿಟರಿ ಬೋರ್ಡಿಗೆ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಲ್ಲಿ ಅವರೇ ವಸೂಲು ಮಾಡುತ್ತಿದ್ದಾರೆ, ಅಲ್ಲಿನ ಬಾಕಿಗೆ ಅವರೇ ಜವಾಬ್ದಾರರು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಸ್ಯಾನಿಟೆರಿ ಬೋರ್ಡಿಗೆ ಮೊದಲು 30 ಹಳ್ಳಿಗಳು ಸೇರಿದ್ದವು. ಈಗ ಸುಮಾರು 20 ಹಳ್ಳಿಗಳನ್ನು ಅದರಿಂದ ಬೇರ್ಪಡಿಸಿದ್ದಾರೆ. ಈ ಹಳ್ಳಿಗಳಲ್ಲಿ ಗ್ರಾಮಪಂಚಾಯಿತಿ ರಚನೆಯಾಗಿಲ್ಲ, ಇದು ಸರ್ಕಾರದ ಜವಾಬ್ದಾರಿ. ಈ ಹಳ್ಳಿಗಳಲ್ಲಿ ಸ್ಯಾನಿಟೆರಿ ಬೋರ್ಡಿನವರೂ ಬಾಕಿ ವಸೂಲು ಮಾಡುತ್ತಿಲ್ಲ. ಇದರಿಂದ ಬಾಕಿ ಇಷ್ಟು ಹೆಚ್ಚಾಗಿ ನಿಂತಿದೆ. ಆದಕಾರಣ ಅಲ್ಲಿ ಗ್ರಾಮ ಪಂಚಾಯಿತಿ ರಚನೆಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಆಗಿದ್ದರೆ, ವಿಚಾರಣೆ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಬಾಕಿ ವಸೂಲು ಮಾಡುವುದಕ್ಕೆ ಬೆಂಗಳೂರು ತಾಲ್ಲೂಕಿನ ಅಮಲ್ದಾರರಿಗೆ Conveyance allowance ಕೊಡುವುದು ಸೂಕ್ತವಲ್ಲವೆ ?

ಶ್ರೀ ಟಿ. ಚನ್ನಯ್ಯ —ಸೂಕ್ತವಲ್ಲ.

---

## Right over the Avenue Trees.

*Q.*—448. **Sri MUDDURAMIAH** (Koratagere—Madhugiri).—

Will the Government be pleased to state:—

(*a*) whether they are aware that the right over the avenue trees was being enjoyed from a long time by the raiyats of the adjoining lands in the Mysore State;

(*b*) whether they have discontinued this practice recently;

(*c*) whether it has come to their notice that the raiyats are being put to hardship by the auctioning of the avenue trees after discontinuing the existing practice?

*A.*—**Sri Kadidal MANJAPPA** (Minister for Revenue and Public Works).—

(*a*) Yes. In certain cases.

(*b*) No.

(*c*) Does not arise in view of reply to clause (*b*) above.

ಶ್ರೀ ಮುದ್ದುರಾಮಯ್ಯ.—ಕೆಲವು ಸಂದರ್ಭಗಳಲ್ಲಿ ರೈತರಿಗೆ ಈ ಹಕ್ಕನ್ನು ಕೊಟ್ಟಿದೆ ಎಂದು ಹೇಳಿದ್ದೀರಿ., ಇಂಥ ಜನರಿಂದ ಈ ಹಕ್ಕನ್ನು ತಪ್ಪಿಸಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ತಪ್ಪಿಸಿಲ್ಲ.

ಶ್ರೀ ಮುದ್ದುರಾಮಯ್ಯ.—ರೈತರಿಗೆ ಸೇರಬೇಕಾದ ವರಗಳನ್ನು ಇಲಾಖೆಯವರು ಪಾರಾಷ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕತಿದಾಳ್ ವ ಂಜಪ್ಪ.—ಬಂದಿಲ್ಲ.

ಶ್ರೀ ಮುದ್ದುರಾಮಯ್ಯ.— ಆ ರೀತಿ ಆಗುವುದು ನಿಮ್ಮ ಗಮನಕ್ಕೆ ಬಂದರೆ ಕೂಡಲೆ ಅದನ್ನು ನಿಲ್ಲಿಸು ವಂತೆ ತಿಳಿಸಿ, ಯಾರು ಹಕ್ಕನ್ನು ಅನುಭವಿಸಿಕೊಂಡು ಬಂದಿದ್ದರೋ ಅವರಿಗೇ ಕೊಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಕಾನೂನು ಪ್ರಕಾರ ಮಾಡುತ್ತೇವೆ.

---

**Village Group Development Scheme (Quota drawn from Village Panchayet Accounts of Srirangapatna Village).**

*Q.*—485. Sri K. PUTTASWAMY (Srirangapatna).—

Will the Government be pleased to state:—

(*a*) whether the Amildar of Srirangapatna has drawn money from the Village Panchayet Accounts of the Village of Srirangapatna towards the quota of the Village Group Development Scheme; (*b*) if so, the names of villages and the amounts drawn and (*c*) the authority conferring this power to the Amildar?

*A.*—Sri H. M. CHANNABASAPPA (Minister for Industries).—

(*a*) Yes.

(*b*) *Vide* Statements appended.

(*c*) Under Government Order No. C. and D. 274-76—RCI-68-52 4, dated 29th April 1953, Government have permitted such of the Village Panchayets as desire to do so, to become members and hold shares in the Rural Industrial Co-operative Societies.

Statement showing the details of amount adjusted towards Rural Industrialisation Scheme, Srirangapatna Taluk.

| Sl. No. | Name of Society | Name of Village Panchayet | Amount adjusted | |
|---|---|---|---|---|
| | | | Rs | a. |
| 1 | Kasaba .. | Hosalu Kyathamballi ... | 405 | 2 |
| | | Nagutanahalli ... ... | 152 | 0 |
| | | Malapura ... ... | 162 | 0 |
| | | Channahalli ... ... | 202 | 10 |
| | | Hebbadi ... ... | 101 | 4 |
| | | Hampapura ... ... | 101 | 6 |
| | | Chikkakanahalli ... ... | 506 | 6 |
| | | Mahadevapura ... ... | 303 | 15 |
| | | Bedarahalli ... ... | 177 | 5 |
| | | Total ... | 2,102 | 0 |
| 2 | Arakere ... | Vadiyanahalli ... ... | 50 | 2 |
| | | Gamanahalli ... ... | 101 | 6 |
| | | Mavarahalli ... ... | 101 | 6 |
| | | Allapatna ... ... | 101 | 6 |
| | | Marisinganahalli ... ... | 35 | 9 |
| | | Neralukere ... ... | 101 | 4 |
| | | Pahatti ... ... | 101 | 6 |
| | | Gundehosahalli ... ... | 177 | 5 |
| | | Bettahalli ... ... | 25 | 7 |
| | | Indagavadi ... ... | 50 | 12 |
| | | Garakahalli ... ... | 20 | 6 |
| | | Chotanahalli ... ... | 50 | 12 |
| | | Gubbasagalu ... ... | 101 | 6 |
| | | Bannahalli ... ... | 101 | 6 |
| | | Mandya Koppal ... ... | 303 | 14 |
| | | Himsanahalli ... ... | 101 | 6 |
| | | Total ... | 1,525 | 11 |